ಅಧ್ಯಕ್ಷರು:– ಮಾನ್ಯ ಎಂ. ಸತೀಶ್ ರೆಡ್ಡಿಯವರು ಮಾತನಾಡುವುದು.

1. ವಿಷಯ: ಬೆಂಗಳೂರು ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಹಲವು ಬಾರ್‌ಗಳು ಮತ್ತು ಮದ್ಯದಂಗಡಿಗಳು ಬೆಳಗ್ಗಿನಿಂದಲೇ ವಹಿವಾಟು ನಡೆಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಂ. ಸತೀಶ್ ರೆಡ್ಡಿ (ಬೊಮ್ಮನಹಳ್ಳಿ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಹಲವು ಬಾರ್‌ಗಳು ಮತ್ತು ಮದ್ಯದಂಗಡಿಗಳು ಬೆಳಗ್ಗಿನಿಂದಲೇ ವಹಿವಾಟು ನಡೆಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವ ಬಗ್ಗೆ ಮಾನ್ಯ ಅಬಕಾರಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಅಬಕಾರಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) ವ್ಯಾಪ್ತಿಯಲ್ಲಿ 236 ಸಿಎಲ್–2, 358 ಸಿಎಲ್–9 ಮದ್ಯದಂಗಡಿಗಳಿದ್ದು, ವಿವಿಧ ಸನ್ನದುಗಳ ವ್ಯವಹಾರದ ಸಮಯವನ್ನು ನಿಗದಿಪಡಿಸಿ ಕೆಳಕಂಡಂತೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕ್ರ. ಸಂ.	ಸನ್ನದುಗಳ ವಿಧ	ನಿಗದಿತ ವ್ಯವಹಾರದ ವೇಳೆ
1.	ಚಿಲ್ಲರೆ ಮದ್ಯ ಮಾರಾಟದ ಅಂಗಡಿ (ಸಿಎಲ್–2 ಸನ್ನದು)	ಬೆಳಗ್ಗೆ 10.00 ರಿಂದ ರಾತ್ರಿ 10.30 ರ ವರೆಗೆ
2.	ಸಿಎಲ್–6(ಎ) ಸ್ಟಾರ್ ಹೋಟೆಲ್ ಸನ್ನದು	ಬೆಳಗ್ಗೆ 10.00 ರಿಂದ ರಾತ್ರಿ 12.00 ರ ವರೆಗೆ
3.	ಸಿಎಲ್–7	ಬೆಳಗ್ಗೆ 9.00 ರಿಂದ ರಾತ್ರಿ 12.00 ರ ವರೆಗೆ
4.	ಬಾರ್ ಸನ್ನದುಗಳು (ಸಿಎಲ್–9 ಸನ್ನದು)	ಬೆಳಗ್ಗೆ 10.00 ರಿಂದ ರಾತ್ರಿ 11.30 ರ ವರೆಗೆ
5.	ಸರ್ಕಾರಿ ಸ್ವಾಮ್ಯದ ಚಿಲ್ಲರೆ ಮದ್ಯ ಸನ್ನದು (ಸಿಎಲ್–11ಸಿ)	ಬೆಳಗ್ಗೆ 10.00 ರಿಂದ ರಾತ್ರಿ 9.00 ರ ವರೆಗೆ

ಕರ್ನಾಟಕ ರಾಜ್ಯ ಪತ್ರ ಸಂಖ್ಯೆ : ಇಸಿಇ/28/ ಸಾ.ಐಎಂಎಲ್/ 2013–14, ದಿನಾಂಕ: 11.06.2014ರಲ್ಲಿ ಹೊರಡಿಸಲಾದ ಸೂಚನೆಗಳನ್ವಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಾರ್ಯವ್ಯಾಪ್ತಿಯಲ್ಲಿನ ಸಿಎಲ್–4, ಸಿಎಲ್–6ಎ, ಸಿಎಲ್–7 ಸಿಎಲ್–9 ಸನ್ನದುಗಳ ಶುಕ್ರವಾರ ಮತ್ತು ಶನಿವಾರ ರಾತ್ರಿಗಳ ವಹಿವಾಟಿನ ಅವಧಿಯನ್ನು ರಾತ್ರಿ 11.30ರ ಬದಲಾಗಿ ತಡರಾತ್ರಿ 1.00 ಗಂಟೆಯವರೆಗೆ ದಿನಾಂಕ: 30.6.2015ರವರೆಗೆ ವಿಸ್ತರಿಸಲಾಗಿರುತ್ತದೆ.

ಮದ್ಯ ಮಾರಾಟ ಸನ್ನದುಗಳಲ್ಲಿ ನಿಗದಿತ ಸಮಯ ಪಾಲನೆಯನ್ನು ಉಲ್ಲಂಘಿಸಿರುವ ಪ್ರಕರಣಗಳು ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳಾಗಿದ್ದು ಹಾಗೂ ಇವುಗಳನ್ನು ದಂಡ ವಿಧಿಸಿ ಇಲಾಖಾ ಮುಖಾಂತರ ಇತ್ಯರ್ಥ್ಯಪಡಿಸಬಹುದಾಗಿದೆ.

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 2012–13ನೇ ಸಾಲಿನಲ್ಲಿ ನಿಗದಿತ ವ್ಯವಹಾರದ ವೇಳೆಯನ್ನು ಉಲ್ಲಂಘಿಸಿದ ಸನ್ನದುದಾರರ ವಿರುದ್ಧ 375 ಪ್ರಕರಣಗಳು ಹಾಗೂ 2013–14ನೇ ಸಾಲಿನಲ್ಲಿ 371 ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 36ರ ಅನ್ವಯ ದಂಡನಾರ್ಹ ಪ್ರಕರಣಗಳನ್ನು ದಾಖಲಿಸಲಾಗಿದೆ.

ಬೆಂಗಳೂರು ನಗರ (ದಕ್ಷಿಣ) ಜಿಲ್ಲೆಯಲ್ಲಿ 2012–13ನೇ ಸಾಲಿನಲ್ಲಿ 71 ಪ್ರಕರಣಗಳು ಹಾಗೂ 2013–14ನೇ ಸಾಲಿನಲ್ಲಿ 97 ಪ್ರಕರಣಗಳನ್ನು ದಾಖಲಿಸಲಾಗಿದೆ.

ಸನ್ನದು ಆವರಣಗಳ ಸಮಯ ಪಾಲನೆ ಉಲ್ಲಂಘನೆ ಒಳಗೊಂಡಂತೆ ಇತರೆ ಸನ್ನದು ಷರತ್ತು ಉಲ್ಲಂಘನೆ ಕುರಿತು ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ಕಾರ್ಯನಿರ್ವಾಹಕ ಸಿಬ್ಬಂದಿಗೆ ನಿರ್ದೇಶನಗಳನ್ನು ನೀಡಲಾಗಿದ್ದು, ಇದರ ಅನುಷ್ಠಾನವನ್ನು ಆಗಿಂದ್ದಾಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ನಿರಂತರ ಗಸ್ತು/ ರಾತ್ರಿ ಗಸ್ತು ಕಾರ್ಯ ನಿರ್ವಹಿಸಲಾಗುತ್ತಿದ್ದು, ಸನ್ನದಿನ ನಿಬಂಧನೆಗಳನ್ನು ಉಲ್ಲಂಘಿಸುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

ಶ್ರೀ ಎಂ. ಸತೀಶ್ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಬಾರ್‌ಗಳು ರಾತ್ರಿ ಪೂರ್ತಿ ತೆಗೆದಿರುತ್ತವೆ. ಬೆಳಗ್ಗೆ 6.00 ಗಂಟೆಯಿಂದ open ಆಗಿರುವಂಥದ್ದು, ಹೊಸದಾಗಿ ಒಬ್ಬ ಡಿ.ಸಿ. ಬಂದ ಮೇಲೆ ಇದು ಆಗುತ್ತಿರುವಂಥದ್ದು. ಅದರ ಬಗ್ಗೆ ನಾನು ಆತನನ್ನು ಕೇಳಿದಾಗ, ಏಕವಚನದಲ್ಲಿ ಮಾತನಾಡಿರುವುದನ್ನು ನಾನು ತಮಗೆ ಬರೆದುಕೊಟ್ಟಿದ್ದೇನೆ. ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಪೊಲೀಸರು ಯಾವಾಗಲೂ ಬಾರ್‌ಗಳನ್ನು ಹಾಗೂ ಸಾರ್ವಜನಿಕರನ್ನು ಕಾಯ್ದುಕೊಂಡು ಇರುವುದಕ್ಕೆ ಆಗುವುದಿಲ್ಲ. ಮನೆ ಪಕ್ಕದಲ್ಲಿ ಬಾರ್‌ಗಳನ್ನು ಕೊಟ್ಟಿರುತ್ತಾರೆ. ಆ ಬಾರ್‌ಗಳನ್ನು ನಿಗದಿತ time ಗೇ ಮುಚ್ಚಬೇಕು. ಇಲ್ಲದಿದ್ದರೆ timing ಅನ್ನೇ ತೆಗೆದುಹಾಕಬೇಕು. ಬೆಂಗಳೂರು ದಕ್ಷಿಣ ವಿಭಾಗದ ಡಿ.ಸಿ. ಯವರಾದ ಮಂಜುನಾಥ್ ರವರನ್ನು ಈ ಬಗ್ಗೆ ನಾನೇ ಪ್ರಶ್ನೆ ಮಾಡಿದಾಗ ಆತ ಏಕವಚನದಲ್ಲಿ ಮಾತನಾಡಿದ್ದಾನೆ.

(ಗೊಂದಲ)

ಅಧ್ಯಕ್ಷರು:– ತಾವು ಕೇಳಿರುವುದು ಬೆಂಗಳೂರು ದಕ್ಷಿಣ ವಲಯದ ವ್ಯಾಪ್ತಿಗೆ ಸಂಬಂಧಪಟ್ಟಿದ್ದು. ಅಷ್ಟಕ್ಕೆ ಮಾತ್ರ ಸೀಮಿತವಾಗಿರಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಕೇವಲ ದಕ್ಷಿಣ ವಲಯ ಅಲ್ಲ. ಆ ಲಿಕ್ಕರ್ ಶಾಪ್‌ನವರು ಬೆಳಗ್ಗೆ ಕಾಫಿ ಹೋಟೇಲ್‌ಗಿಂತ ಮುಂಚಿತವಾಗಿ ತೆಗೆಯುತ್ತಾರೆ! ಏಕೆ?

(ಗೊಂದಲ)

ಅಧ್ಯಕ್ಷರು:– ಅದನ್ನು ಅವರು ಕೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:– ಒಂದು ನಿರ್ದಿಷ್ಟವಾದಂತಹ ಅವಧಿ ಇರುವಾಗ ಬೆಳಗ್ಗಿನಿಂದಲೇ ಏಕೆ ಮದ್ಯದಂಗಡಿಯನ್ನು ತೆರೆಯಲು ಬಿಡುತ್ತಾರೆ?

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಬೆಳಗ್ಗೆ 6.00 ಗಂಟೆಗೆ open ಮಾಡಬೇಕೆಂದು ಆದೇಶ ಮಾಡಿರುವುದರಿಂದ ಸರ್ಕಾರಕ್ಕೆ ಅಪಕೀರ್ತಿ ಬರುತ್ತದೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ ಈಗ ಸಮಸ್ಯೆ ಇರುವುದು ಆ ಡಿ.ಸಿ. ಬಂದ ಮೇಲೆ ಆರು ಗಂಟೆಗೆ ಶುರು ಮಾಡಿಸಿದ್ದಾರೆ. ಆರು ಗಂಟೆಗೆ ಪ್ರಾರಂಭ ಮಾಡಬೇಕಾದರೆ monthly ಏನು ಕೊಡಬೇಕೆನ್ನುವುದನ್ನೂ ಕೂಡ fix ಮಾಡಿ ಕೊಟ್ಟಿರುತ್ತಾರೆ ಎಂದು ಬಾರ್‌ನವರು ಹೇಳುತ್ತಿದ್ದಾರೆ. ಅವರು ಅಬಕಾರಿ ಸಚಿವರ ಹತ್ತಿರದ ಸಂಬಂಧಿಯಾಗಿರುವುದರಿಂದ ಆ ರೀತಿ ವರ್ತನೆ ಮಾಡುತ್ತಿದ್ದಾರೆ. ಹಿಂದೆ ಅವರು ಮೈಸೂರಿನಲ್ಲಿ ಇದ್ದಾಗಲೂ ಕೂಡ ಅವರನ್ನು ಲೋಕಾಯುಕ್ತರವರು arrest ಮಾಡಿದ್ದರು. ಜೈಲಿಗೆ ಹೋಗಿದ್ದರು.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಡಿ.ಸಿ. ಯವರಾದ ಮಂಜುನಾಥ್‌ರವರ ಮೇಲೆ ಎಲ್ಲಾ ಕಡೆ allegation ಇದೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅವರು ಯಾರನ್ನೂ care ಮಾಡುವುದಿಲ್ಲ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇದನ್ನು ದಯವಿಟ್ಟು serious ಆಗಿ ತೆಗೆದುಕೊಳ್ಳಬೇಕು. ಒಬ್ಬ ಭ್ರಷ್ಟ ಅಧಿಕಾರಿಯನ್ನು ರಕ್ಷಣೆ

ಮಾಡುವ ಕೆಲಸವನ್ನು ಸರ್ಕಾರ ಮಾಡಬಾರದು. ಆ ಅಧಿಕಾರಿ ನಮಗೇ ಬೆದರಿಕೆ ಹಾಕುವ ಲೆವೆಲ್‌ಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ವಿ. ಸುನೀಲ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರೂ ಕಳೆದ ಅಧಿವೇಶನದಲ್ಲಿ ಚರ್ಚೆ ಮಾಡಿದ್ದರು.

(ಗೊಂದಲ)

ಅಧ್ಯಕ್ಷರು:– ಆಯಿತು, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಆದರೆ ಚರ್ಚೆಯಾಗುವುದಿಲ್ಲ

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– 45 ಬೇನಾಮಿ ಬಾರ್ ಅವರ ಹೆಸರಿನಲ್ಲಿಯೇ ಇದೆ. ಅವರ ವಿರುದ್ಧ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:– ಮಾನ್ಯ ವಿಶ್ವನಾಥ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಯನ್ನು ಅಧಿಕಾರದಿಂದ ತೆಗೆಯಲೇಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಅಬಕಾರಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) ವ್ಯಾಪ್ತಿಯಲ್ಲಿ 236 ಸಿಎಲ್–2,358 ಸಿಎಲ್–9 ಮದ್ಯದಂಗಡಿಗಳಿದ್ದು, ವಿವಿಧ ಸನ್ನದುಗಳ ವ್ಯವಹಾರದ

ಸಮಯವನ್ನು ನಿಗದಿಪಡಿಸಿ ಕೆಳಕಂಡಂತೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಚಿಲ್ಲರೆ ಮದ್ಯ ಮಾರಾಟದ ಅಂಗಡಿ (ಸಿಎಲ್–2 ಸನ್ನದು) ಬೆಳಗ್ಗೆ 10.00 ರಿಂದ ರಾತ್ರಿ 10.30 ವರೆಗೆ, ಸಿಎಲ್–6(ಎ) ಸ್ಟಾರ್ ಹೋಟೆಲ್ ಸನ್ನದು ಸಿಎಲ್–7 ಬೆಳಿಗ್ಗೆ 10.00 ರಿಂದ ರಾತ್ರಿ 12.00 ರವರೆಗೆ, ಸಿಎಲ್–7 ಬೆಳಗ್ಗೆ 9.00 ರಿಂದ ರಾತ್ರಿ 12.00 ರವರೆಗೆ, ಬಾರ್ ಸನ್ನದುಗಳು (ಸಿಎಲ್–9 ಸನ್ನದು) ಬೆಳಗ್ಗೆ 10.00 ರಿಂದ ರಾತ್ರಿ 11.30 ರವರೆಗೆ, ಸರ್ಕಾರಿ ಸ್ವಾಮ್ಯದ ಚಿಲ್ಲರೆ ಮದ್ಯ ಸನ್ನದು (ಸಿಎಲ್–11ಸಿ) ಬೆಳಗ್ಗೆ 10.00 ರಿಂದ ರಾತ್ರಿ 9.00 ರವರೆಗೆ. ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: ಇಸಿಇ./28/ಸಾ.ಐಎಂಎಲ್/ 2013–14 . . .

ಶ್ರೀ ಎಂ. ಸತೀಶ್ ರೆಡ್ಡಿ:– ಸರ್, ನಮಗೆ timings ಎಲ್ಲಾ ಗೊತ್ತಿದೆ. ಆದರೆ ಡಿಸಿ ಯವರ timings ಇದೆ. ಸರ್ಕಾರಿ timings ಅಲ್ಲ ಇದು. ಇದು ಡಿ.ಸಿ.ಯವರ timings ಎಂದು ನಾವು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ ನಾನೂ ಕಾನೂನು ಸಚಿವರನ್ನು ಕೇಳುತ್ತೇನೆ. dejure correct.Defacto ಏನು?

(ಗೊಂದಲ)

ಅಧ್ಯಕ್ಷರು:– ಈ ರೀತಿ ಆದರೆ ಚರ್ಚೆ ಆಗುವುದಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರೆ, ಈಗ ನೀವು ಕೇಳಿರುವುದಕ್ಕೆ ಸಚಿವರು ಏನು ಉತ್ತರ ನೀಡುತ್ತಾರೆ ನೀಡಲಿ. ಈಗ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇದು ಸತತವಾಗಿ ಮೂರನೇ ಬಾರಿ ಸದನದಲ್ಲಿ ಮಾನ್ಯ ಸತೀಶ್ ರೆಡ್ಡಿಯವರು, ಎಸ್.ಆರ್. ವಿಶ್ವನಾಥ್‌ರವರು ಪ್ರಸ್ತಾಪ ಮಾಡುತ್ತಿರುವುದು. ಹಿಂದೆ ನೀವು ಸದನದಲ್ಲಿ ಪ್ರಸ್ತಾಪ ಮಾಡಿದಾಗಲೂ ಕೂಡ, violation ಮಾಡಿರುವಂತಹ ಯಾವುದೇ

ಅಧಿಕಾರಿಯಾಗಿದ್ದರೂ ಕೂಡ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೆ. ಮತ್ತೆ ಆ ಪ್ರಸ್ತಾಪ ಮಾಡುತ್ತಿದ್ದೀರಿ. ಅಧಿಕಾರಿ ಯಾರು ಎಂದು ತಾವು ಲಿಖಿತವಾಗಿ ಕೊಟ್ಟರೆ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು:– ಆ ಅಧಿಕಾರಿ ಯಾರು ಎನ್ನುವುದನ್ನು ಲಿಖಿತವಾಗಿ ಕೊಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಷ್ಟು ಜನ ನಿಂತು ಮಾತನಾಡುವುದು?

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:–ಮಾನ್ಯ ಅಧ್ಯಕ್ಷರೆ, ಎಲ್ಲರೂ ಬೆಂಗಳೂರು ದಕ್ಷಿಣಕ್ಕೆ ಸಂಬಂಧಪಟ್ಟವರು. ಎಲ್ಲಾ ಅಲ್ಲಿನ ಶಾಸಕರು.

(ಗೊಂದಲ)

ಅಧ್ಯಕ್ಷರು:– ನೀವು ಅದನ್ನು ಮಾನ್ಯ ಸಚಿವರಿಗೆ ಬರೆದು ಕೊಡಿ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಬರೆದುಕೊಟ್ಟಿದ್ದೇವೆ. ಸಂಬಂಧಪಟ್ಟ ಸಚಿವರಿಗೂ ಕೊಟ್ಟಿದ್ದೇವೆ. ಪಾಪ ಅವರು ನಮಗೆ ಸಹಾಯ ಮಾಡಿದ್ದಾರೆ. ಆದರೆ ಇಂತಹ ಬೇಜವಾಬ್ದಾರಿ ಅಧಿಕಾರಿ ಒಬ್ಬ ಎಂ.ಎಲ್.ಎ.ಗೆ ವಿರುದ್ಧವಾಗಿ ಮಾತನಾಡುತ್ತಾರೆ ಎಂದರೆ ಅವರ ವಿರುದ್ಧ ಏನೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಹೇಗೆ, ಮಾನ್ಯ ಅಧ್ಯಕ್ಷರೆ? ಅದನ್ನು ನಾವು question ಮಾಡುವ ಹಾಗೆ ಇಲ್ಲ. ಭ್ರಷ್ಟಾಚಾರ ಮಾಡಿಕೊಳ್ಳಲಿ ಎಂದು ಬಿಟ್ಟುಬಿಡಬೇಕೇ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ಲೋಕಾಯುಕ್ತರವರು ಕೇಸ್ ಹಾಕಿ ಜೈಲಿಗೆ ಹೋಗಿರುವಂತಹ ಅಧಿಕಾರಿ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಜೈಲಿಗೆ ಹೋಗಿರುವಂತಹ ಅಧಿಕಾರಿಯನ್ನು ತಾವು ಏಕೆ ರಕ್ಷಣೆ ಮಾಡುತ್ತಿದ್ದೀರಿ? ಇದರಿಂದ ಸಚಿವರಿಗೆ ಕೆಟ್ಟ ಹೆಸರು ಬರುತ್ತದೆ. ಸಚಿವರು ಒಳ್ಳೆಯವರಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಆ ಅಧಿಕಾರಿ ಯಾರು?

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಅವರು ಮಂಜುನಾಥ್ ಎನ್ನುವ ಅಧಿಕಾರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಜಯಚಂದ್ರರವರೆ ನಾನು ಬೆಳಗಾವಿ ಅಧೀವೇಶನದಲ್ಲೂ ಇದರ ಬಗ್ಗೆ ಚರ್ಚೆ ಮಾಡಿದ್ದೆ. ಆ ಅಧಿಕಾರಿಯ ಹೆಸರು ಹೇಳಿ ಏನೇನು ಅವ್ಯವಹಾರ ಮಾಡಿದ್ದಾರೆ, ಏನೇನು ತೊಂದರೆ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿದ್ದೇನೆ. ಆಗಲೂ ತಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ. ಆದರೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. Repeat ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಸಾಕು ಸುಮ್ಮನಿರಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಸಚಿವರು action ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೂ ಆತ ಹೆದರದಿದ್ದರೆ ಆತ ಸಚಿವರಿಗಿಂತಲೂ powerful !

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಸಚಿವರು ನಮಗೆ ಗೌರವ ಕೊಟ್ಟಿದ್ದಾರೆ. ಕರೆದು ಮಾತನಾಡಿದ್ದಾರೆ. ಆದರೆ ಈ ಅಧಿಕಾರಿ ದುರ್ವತನೆಯಿಂದ ಮಾತನಾಡಿದ್ದಾರೆ. ಸಚಿವರ ಬಗ್ಗೆ ನಮಗೇನೂ ಆಕ್ಷೇಪವಿಲ್ಲ. ಈ ಅಧಿಕಾರಿ ಸಚಿವರನ್ನೇ control ಮಾಡುವಂತಹ ಲೆವೆಲ್‌ಗೆ ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು:– ತಾವು ಈಗ ಹೇಳಿದ್ದೀರಿ. ಕಾನೂನು ಸಚಿವರು ಇದರ ಬಗ್ಗೆ ಗಮನಹರಿಸಿದ್ದಾರೆ. ಸಚಿವರು ಅಗತ್ಯ ಕ್ರಮವನ್ನು ಕೈಗೊಳ್ಳುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ಇಂತಹ ವ್ಯಕ್ತಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಮಾನ್ಯ ಸಚಿವರಾದ ಸತೀಶ್ ಜಾರಕಿಹೊಳಿಯವರು ಒಳ್ಳೆಯವರಿದ್ದಾರೆ. ಅವರ ಹೆಸರನ್ನು ಹಾಳು ಮಾಡುತ್ತಿದ್ದಾರೆ ಅವರು. ಇದು ಎಲ್ಲರಿಗೂ ತೊಂದರೆಯಾಗಿರುವಂಥದ್ದು. ದಯವಿಟ್ಟು ಆ ಅಧಿಕಾರಿಯನ್ನು suspend ಮಾಡಬೇಕು.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ನಾವು ಸುಮ್ಮನೆ ಆಪಾದನೆ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– ಗೌರವಾನ್ವಿತ ಸದಸ್ಯರು raise ಮಾಡಿದ್ದಾರೆ. ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ತಾವು ಈ ರೀತಿಯೇ ಮಾಡಬೇಕೆಂದು insist ಮಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಸರ್, ನಾವು ಈ ರೀತಿಯೇ ಮಾಡಬೇಕೆಂದು ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. Please Tesame. ಇದೇನಿದು? ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:– ಭ್ರಷ್ಟ ಅಧಿಕಾರಿಯನ್ನು ತಾವು ಏಕೆ ರಕ್ಷಣೆ ಮಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ತಾವು ಹೇಳಿದ್ದೀರಿ. ಸಚಿವರು ಉತ್ತರ ಹೇಳುತ್ತಾರೆ. ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ. ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚೆ ಬಂದಾಗ ಆಗ ಈ ವಿಷಯದ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಕಳೆದ ಅಧಿವೇಶನದಲ್ಲಿಯೂ ಈ ವಿಷಯದ ಬಗ್ಗೆ ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಜಗದೀಶ್ ಶೆಟ್ಟರವರೆ, ದಯವಿಟ್ಟು ಇದು calling attention.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಆತ ತೊಂದರೆ ಕೊಡುವುದನ್ನು ಬಿಟ್ಟಿಲ್ಲ ಎನ್ನುವುದನ್ನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಕರಳು ಬಳ್ಳಿ ಏನು ಮಾಡೋದಪ್ಪಾ!

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಕರಳು ಬಳ್ಳಿ ಎಂದರೆ ಈ ರೀತಿ ಮಾಡಬಹುದೇ? ಅವರಿಗೆ ಎಲ್ಲಾ power ಕೊಟ್ಟುಬಿಡುವುದೇ? ಇದು ಸರಿಯಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ:– ಕರಳು ಬಳ್ಳಿ ಎಂದರೆ ಕೊಳ್ಳೆ ಹೊಡೆಯುವುದಕ್ಕೆ ಅವಕಾಶ ಕೊಡುವುದಕ್ಕಾಗುತ್ತದೆಯೇ?!

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಜಯಚಂದ್ರವರೆ, ಇದರ ಬಗ್ಗೆ ತಾವು ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಪ್ರಸ್ತಾಪಮಾಡಿದ್ದಲ್ಲ. ಹಿಂದೆಯೇ ಪ್ರಸ್ತಾಪ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ, ಕ್ರಮವನ್ನು ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಖಂಡಿತ ಕ್ರಮವನ್ನು ತೆಗೆದುಕೋಳ್ಳುತ್ತೇವೆ.

ಅಧ್ಯಕ್ಷರು:– ಮಾನ್ಯ ಜಗದೀಶ್ ಕುಮಾರ್‌ರವರು ಹಾಜರಿಲ್ಲ. ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಮಾತನಾಡುವುದು.

2. ವಿಷಯ: ಸಕಲೇಶಪುರ ಮತ್ತು ಆಲೂರು ಹಾಗೂ ಹಾಸನ ತಾಲ್ಲೂಕಿನ ಕೆಲ ಹಳ್ಳಿಗಳು ಹೇಮಾವತಿ ಜಲಾಶಯ ಯೋಜನೆಯ ಹಿನ್ನೀರಿನಿಂದ ಶೀತಪೀಡಿತಗೊಂಡಿರುವುದರಿಂದ ಆ ಹಳ್ಳಿಗಳನ್ನು ಸ್ಥಳಾಂತರಗೊಳಿಸುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಸಕಲೇಶಪುರ ಮತ್ತು ಆಲೂರು ಹಾಗೂ ಹಾಸನ ತಾಲ್ಲೂಕಿನ ಕೆಲ ಹಳ್ಳಿಗಳು ಹೇಮಾವತಿ ಜಲಾಶಯ ಯೋಜನೆಯ ಹಿನ್ನೀರಿನಿಂದ ಶೀತಪೀಡಿತಗೊಂಡಿರುವುದರಿಂದ ಆ ಹಳ್ಳಿಗಳನ್ನು ಸ್ಥಳಾಂತರಗೊಳಿಸುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಹಾಸನ ಜಿಲ್ಲೆ, ಹಾಸನ, ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ 21 ಗ್ರಾಮಗಳು ಹೇಮಾವತಿ ಜಲಾಶಯ ಹಿನ್ನೀರಿನಿಂದ ಶೀತಪೀಡಿತವಾಗಿದೆ ಎಂದು ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು ಸದರಿ ಗ್ರಾಮಗಳನ್ನು ಸ್ಥಳಾಂತರಿಸಲು ಮನವಿಯನ್ನು ಸಲ್ಲಿಸಿರುತ್ತಾರೆ.

ಹೇಮಾವತಿ ಮತ್ತು ಯುಗಚಿ ಯೋಜನೆಗಳಡಿ ಶೀತಪೀಡಿತವಾಗಿದೆ ಎಂದು ಹೇಳಲಾಗಿರುವ ಗ್ರಾಮಗಳ ಸ್ಥಳ ತನಿಖೆ ನಡೆಸಿ ಶೀತಪೀಡಿತವಾಗುವುದನ್ನು ತಡೆಗಟ್ಟಲು ಇರುವ ತಾಂತ್ರಿಕ ಹಾಗೂ ಇತರೆ ಬದಲಿ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ, ಸೂಕ್ತ ಪರಿಹಾರೋಪಾಯಗಳೊಂದಿಗೆ ಗ್ರಾಮಗಳನ್ನು ಸ್ಥಳಾಂತರಿಸುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರದ ಆದೇಶ ಸಂಖ್ಯೆ:ಕಂಇ 215